**ಪ್ರ ದ ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಶಾಲನಗರ**

**ಸಿ ಸಿ ನಂಃ 1709/23**

ಸಾಕ್ಷಿಯ ಹೆಸರುಃ ಬೋಪಯ್ಯ
ತಂದೆ /ಗಂಡನ ಹೆಸರು ಃ ನಂಜಪ್ಪ
ವಯಸ್ಸು ಃ **61**
ಉದ್ಯೋಗ ಃ ನಿರುದ್ಯೋಗಿ
ವಾಸ ಸ್ಥಳ ಃ ಕುಶಾಲನಗರ.

ಪ್ರಾಸಾ4

ಚಾಸಾ11

**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ 24.10.2024**

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದ**

ದಿಃ **23.06.2023** ರಂದು ಬುಲಿಟ್ ಶೋರುಂ ಬಳಿ ನಾನು ನನ್ನ ಸ್ನೇಹಿತರಾದ ಚಾಸಾ **12** ರವರು ಮಾತನಾಡಿಕೊಂಡು ನಿಂತಿರುವಾಗ ಪೋಲಿಸರು ಅಲ್ಲಿಗೆ ಬಂದು ಅಪಘಾತ ವಿಚಾರ ತಿಳಿಸಿ ಮಹಜರಗೆ ಸಹಕರಿಸುವಂತೆ ಕೇಳಿದ್ದು ಅದಕ್ಕೆ ನಾವು ಒಪ್ಪಿದ ಮೇರೆಗೆ ನಮಗೆ ನೋಟಿಸನ್ನು ಜಾರಿ ಮಾಡಿ ಅಲ್ಲಿಂದ ಅಪಘಾತ ಸ್ಥಳಕ್ಕೆ ಹೋಗಿದ್ದು ಚಾಸಾ **3** ರವರು ಅಪಘಾತ ಸ್ಥಳವನ್ನು ತೋರಿಸಿಕೊಟ್ಟ ಮೇರಗೆ ಪೋಲಿಸರು ನಮ್ಮ ಸಮಕ್ಷಮ ಮಹಜರ ಕ್ರಮವನ್ನು ಜರುಗಿಸಿದ್ದು ಅದಕ್ಕೆ ನಾವು ಸ್ಥಳದಲ್ಲಿ ಸಹಿ ಮಾಡಿರುತ್ತೇನೆ . ಆ ಸಮಯದಲ್ಲಿ ನಾನು ಚಾಸಾ **12** ಮತ್ತು **3** ರವರು ಹಾಜರಿದ್ದೆವು . ಸದರಿ ಮಹಜರನ್ನು ಸಂಜೆ **4.00** ಯಿಂದ **4.45** ಸಮಯದಲ್ಲಿ ಮಾಡಲಾಯಿತು .

ನಂತರ ಅಮಾನತ್ತು ಮಹಜರಿಗೆ ಪೋಲಿಸ ಠಾಣೆಗೆ ಬರಲು ಸೂಚಿಸಿದ್ದು ಅಲ್ಲಿಂದ ನಾವು ಪೋಲಿಸ ಠಾಣೆಗೆ ಹೋಗಿರುತ್ತೇವೆ . ಅಲ್ಲಿ ಅಪಘಾತಗೊಳಪಟ್ಟ ಬೈಕ ಹಾಗು ಸ್ಕೂಟರನ್ನು ಪೋಲಿಸರು ಮಹಜರ ಮೂಲಕ ಅಮಾನತ್ತು ಪಡಿಸಿಕೊಂಡಿರುತ್ತಾರೆ . ಸದರಿ ಬೈಕ ಸಂಖ್ಯೆ ಕೆ ಎ **45** ಇ ಬಿ **6488** ಆಗಿದ್ದು ಸರಿಯಾಗಿ ನನಗೆ ನೆನಪಿಲ್ಲ . ಸ್ಕೂಟಿ ಸಂಖ್ಯೆ ಕೆ ಎ **12** ಆಗಿದ್ದು ಸಂಖ್ಯೆ

ನನಗೆ ನೆನಪಿಲ್ಲ **.** ಸದರಿ ಮಹಜರಿಗೆ ನಾನು ಸ್ಥಳದಲ್ಲಿ ಸಹಿ ಮಾಡಿದ್ದು ಆಗ ನನ್ನೊಂದಿಗೆ ಚಾಸಾ **3** ಮತ್ತು **12** ರವರು ಹಾಜರಿದ್ದರು **.** ಆಗ ಸಮಯ ಸಂಜೆ **5.00** ರಿಂದ **5.45** ಆಗಿರುತ್ತದೆ**.**

ಸಾಕ್ಷಿ ಸ್ಥಳ ಮಹಜರಿನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೆ ನಿಪಿ **2** ಎಂದು **,** ಸಾಕ್ಷಿ ಸಹಿಯನ್ನು ನಿಪಿ **2** ಬಿ ಎಂದು **,** ಅಮಾನತ್ತು ಮಹಜರ ಈಗಾಗಲೆ ನಿಪಿ **3** ಎಂದು **,** ಸಾಕ್ಷಿ ಸಹಿಯನ್ನು ನಿಪಿ **3** ಬಿ ಎಂದು ಗುರುತಿಸಲಾಯಿುತು **.**

ಪಾಟೀ ಸವಾಲುಃ ಶ್ರೀ ಹೆಚ್ ಆರ್ ಜೆ ವಕೀಲರಿಂದ

ನಾನು ಪದವೀದರ . ಮಹಜರಗೆ ಬರುವಂತೆ ನನ್ನನ್ನು ಕರೆದ ಪೋಲಿಸರ ಹೆಸರು ನನಗೆ ಗೊತ್ತಿಲ್ಲ . ಮಹಜರನ್ನು ಪೋಲಿಸರು ಬರೆದಿದ್ದು ಅವರ ಹೆಸರು ನನಗೆ ಗೊತ್ತಿಲ್ಲ . ಮಹಜರ ಸಮಯದಲ್ಲಿ ನಮ್ಮನ್ನು ಹೊರತು ಪಡಿಸಿ ಸುಮಾರು ಸಾರ್ವಜನಿಕರು ದೂರದಿಂದ ನಿಂತು ನೋಡುತ್ತಿದ್ದರು . ಮಹಜರನ್ನು ನಾನು ಓದಿ ಸಹಿ ಮಾಡಿರುತ್ತೇನೆ . ಅಪಘಾತ ಸ್ಥಳದ ಚೆಕ್ಕುಬಂದಿಯನ್ನು ಮಹಜರನಲ್ಲಿ ನಮೂದಿಸಿದ್ದು ಈಗ ನನಗೆ ನೆನಪಿಲ್ಲ .

ಅಪಘಾತ ಸ್ಥಳದಿಂದ ಪೋಲಿಸ ಠಾಣೆ ಅಂದಾಜು **2** ರಿಂದ **3** ಕಿ ಮಿ ದೂರದಲ್ಲಿದೆ . ನಾನು ಮಹಜರಗೆ ಸ್ಥಳಕ್ಕೆ ಹೋಗದೆ ಆರೋಪಿಗೆ ತೊಂದರೆ ನೀಡಲು ಸುಳ್ಳು ಮಹಜರಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ . ಮಹಜರಗೆ ಸಂಬಂದಿಸಿದ ಯಾವುದೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ . ಚಾಸಾ **1** ರವರು

ನನ್ನ ಸಂಬಂಧಿಕರು ಅಲ್ಲ . ಚಾಸಾ 1 ರವರಿಗೆ ಸಹಾಯ ಮಾಡಲು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

ಪಾಟೀ ಸವಾಲುಃ ಶ್ರೀ ಹೆಚ್ ಸಿ ಎಮ್ ಕೆ ವಕೀಲರಿಂದ 2 ನೇ ಆರೋಪಿ ಪರಃ

ಅಪಘಾತ ಸ್ಥಳದಲ್ಲಿ ಅಪಘಾತದ ಕುರುಹುಗಳು ಇದ್ದು ಅದನ್ನು ಮಹಜರನಲ್ಲಿ ಬರೆಯಲಾಗಿದೆ . ಅಪಘಾತ ಸ್ಥಳದಲ್ಲಿ ಅಪಘಾತಗೊಳಪಟ್ಟರವರ ಚಪ್ಪಲಿ ಬಿದ್ದಿದ್ದು ಅದನ್ನು ಪೋಲಿಸರು ಅಮಾನತು ಪಡಿಸಿಕೊಂಡ ಬಗ್ಗೆ ನನಗೆ ನೆನಪಿಲ್ಲ . ಸ್ಥಳದಲ್ಲಿ ಬೈಕಿಗೆ ಸಂಬಂದಿಸಿದ ಯಾವುದೇ ವಸ್ತುಗಳನ್ನು ಅಮಾನತು ಪಡಿಸಿಕೊಂಡಿರುವುದಿಲ್ಲ . ಪೋಲಿಸರು ಸ್ಥಳದಲ್ಲಿ ಬೈಕಿನ ಉಜ್ಜಿತ ಗುರುತುಗಳನ್ನು ಅಳತೆ ಮಾಡಿ ಮಹಜರನಲ್ಲಿ ನಮೂದಿಸಿರುವ ಬಗ್ಗೆ ನನಗೆ ನೆನಪಿಲ್ಲ . ಅಪಘಾತ ಸ್ಥಳವು ರಸ್ತೆಯ ಎಡಬಧಿಯ ಬಿಳಿ ಪಟ್ಟಿಯಿುಂದ ಅಂದಾಜು 2 ರಿಂದ 3 ಅಡಿ ಅಂತರದಲ್ಲಿ ಇತ್ತು ಎಂದು ತೋರಿಸಿರುತ್ತಾರೆ . ಸ್ಕೂಟಿ ಉಜ್ಜಿದ ಗುರುತು ಇದ್ದು ಅದನ್ನು ಅಳತೆ ಮಾಡಿರುವ ಬಗ್ಗೆ ನನಗೆ ನೆನಪಿಲ್ಲ . ಚಾಸಾ 3 ರವರು ನನಗೆ ಪರಿಚಯ . ನಾನು ಯಾವುದೆ ಮಹಜರನಲ್ಲಿ ಭಾಗಿಯಾಗಿಲಿಲ್ಲ . ಚಾಸಾ 3 ಹಾಗು ಚಾಸಾ 1 ರವರು ಸಂಬಂಧಿಕರಾಗಿದ್ದು ಅವರಿಗೆ ಸಹಾಯ ಆಗಲಿ ಎಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪೋಲಿಸ ಠಾಣೆಯಲ್ಲಿ ವಾಹನಗಳನ್ನು ಯಾರು ಹಾಜರು ಪಡಿಸಿದ್ದರು ಎಂದು ನನಗೆ ಗೊತ್ತಿಲ್ಲ . ಬೈಕಿನ ಹಲವು ಭಾಗಗಳು ಜಕಂ ಆಗಿದ್ದು ನನಗೆ ಸರಿಯಾಗಿ ನೆನಪಿಲ್ಲ . ಬೈಕ ಬಣ್ಣ ಕಪ್ಪು ಇರಬಹುದು ನನಗೆ ನೆನಪಿಲ್ಲ . ನಿಪಿ 3 ನ್ನು ಲ್ಯಾಪಟಾಪನಲ್ಲಿ ಟೈಪ ಮಾಡಿ ಪೋಲಿಸ ಠಾಣೆಯಲ್ಲಿ ಪ್ರಿಂಟ ತೆಗೆದು

ಸ್ಥಳದಲ್ಲಿ ನಮ್ಮ ಸಹಿ ಪಡೆದಿರುತ್ತಾರೆ . ಸ್ಕೂಟಿ ಯಾವ ಭಾಗಗಳು ಜಖಂ ಆಗಿತ್ತು ಎಂದು ನನಗೆ ನೆನಪಿಲ್ಲ . ಸ್ಕೂಟಿ ಬಣ್ಣ ಕಪ್ಪು ಇರಬಹುದು ಎಂದು ನನೆನಪಿಲ್ಲ. ಪೋಲಿಸ ಠಾಣೆಯಲ್ಲಿ ನನ್ನಿಂದ ಒಂದು ಸಹಿ ಪಡೆದಿರುತ್ತಾರೆ . ನಾನು ಯಾವುದೆ ಮಹಜರನಲ್ಲಿ ಭಾಗಿಯಾಗಿಲಿಲ್ಲ. ಮೃತನ ಕುಟುಂಬಕ್ಕೆ ಅನುಕೂಲವಾಗಲೆಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾ ದಂ, ಕುಶಾಲನಗರ.